ಸರಿದಾರಿಗೆ ತರಲು ಅಮ್ಮಂದಿರು ಮಾಡುವ ಪ್ರಯತ್ನಗಳ ಹಿಂದೆ ಕೇವಲ ನಿಷ್ಕಲ್ಮಷ ಪ್ರೀತಿ, ಕಾಳಜಿ ಮಾತ್ರ ಇರುತ್ತದೆಯೇ? ಅಮ್ಮಂದಿರ ಈ ರೀತಿಯ ಪ್ರೀತಿ ಮಕ್ಕಳಿಗೆ ಬಂಧನವಾಗಿ ಕಾಣಿಸಿದರೆ ಅಂತಹ ಮಕ್ಕಳು ನಮ್ಮ ಸಿನಿಮಾ ಸಾಹಿತ್ಯಗಳಲ್ಲಿ ತೋರಿಸುವಂತೆ ಕೃತಘ್ನರೇ?

### ಪ್ರಕೃತಿ ಮತ್ತು ತಾಯಿ

ಮಾನವನೂ ಕೂಡ ಪ್ರಕೃತಿಯ ಒಂದು ಭಾಗವೇ ಆಗಿರುವುದರಿಂದ ತಾಯ್ತನದ ಬಗೆಗೆ ಪ್ರಕೃತಿಯ ನಿಯಮಗಳನ್ನು ಅರ್ಥಮಾಡಿಕೊಳ್ಳೋಣ.

ಇಡೀ ಜಗತ್ತಿನ ಜೀವಿಗಳನ್ನು ಪೋಷಿಸುವ ಪ್ರಕೃತಿಯೇ ಒಬ್ಬಳು ಮಹಾತಾಯಿ. ಇವಳು ಇತರ ಜೀವರಾಶಿಗಳು ತಮ್ಮ ಸಂತಾನವನ್ನು ರಕ್ಷಿಸಿ ಮುಂದುವರೆಸಲು ಸಹಾಯಕವಾಗುವಂತೆ ಕೆಲವು ಅನಿವಾರ್ಯತೆಗಳನ್ನು ಸೃಷ್ಟಿಸಿದ್ದಾಳೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಅಮ್ಮ ಮತ್ತು ಮಕ್ಕಳ ನಡುವಿನ ಅನುಬಂಧ. ಗರ್ಭ ಧರಿಸಿದ ಕೂಡಲೇ ಅಮ್ಮಂದಿರಲ್ಲಿ ತಮ್ಮ ಶಿಶುವಿನ ಬಗೆಗೆ ಕಕ್ಕುಲಾತಿಯನ್ನು ಮೂಡಿಸಲು ಅಗತ್ಯವಾದ ಹಾರ್ಮೋನ್‌ಗಳನ್ನು ಸೃಜಿಸಿ ತಾಯ್ತನಕ್ಕೆ ಅವರನ್ನು ಸಿದ್ಧಗೊಳಿಸುತ್ತದೆ. ತಾನು ಇನ್ನೊಂದು ಜೀವವನ್ನು ಭೂಮಿಗೆ ತರುವ ಮತ್ತು ಅದನ್ನು ಪೋಷಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಿದ್ದೇನೆ ಎನ್ನುವ ಭಾವವೇ ಅವಳಿಗೆ ಮಗುವಿನ ಬಗೆಗೆ ಪ್ರೀತಿಯ ಜೊತೆಗೆ ಒಂದು ಮಟ್ಟದ ಅಧಿಕಾರವನ್ನೂ (ಪೊಸೆಸಿವ್‌ನೆಸ್) ನೀಡುತ್ತದೆ. ಮಗು ಸುರಕ್ಷಿತವಾಗಿ ಬೆಳೆದು ಸ್ವತಂತ್ರವಾಗುವವರೆಗೆ ಇದರ ಅಗತ್ಯವೂ ಇರುತ್ತದೆ.

ಪ್ರಾಣಿವರ್ಗದಲ್ಲಿ ತಾಯಿಯಿಂದ ಮಗುವಿನ ರಕ್ಷಣೆಯ ಮತ್ತು ಜೀವನಕೌಶಲ್ಯದ ತರಬೇತಿಯ ಅಗತ್ಯ ಮಗು ಬೆಳೆದು ಸ್ವಂತಂತ್ರವಾಗಿ ತನ್ನ ಆಹಾರವನ್ನು ಗಳಿಸಿಕೊಳ್ಳಲು ಶಕ್ತವಾಗುವವರೆಗೆ ಮಾತ್ರ ಇರುವಂತೆ ಪ್ರಕೃತಿ ನೋಡಿಕೊಂಡಿದೆ. ಈ ಸಮಯದಲ್ಲಿ ಮಗುವಿನ ಭದ್ರತೆ ಮತ್ತು ಆರೋಗ್ಯ ಅಮ್ಮಂದಿರಲ್ಲಿ ಆತಂಕವನ್ನು ಸೃಷ್ಟಿಸುವುದು ಸಹಜ. ಈ ಅವಧಿ ಬೇರೆಬೇರೆ ಪ್ರಾಣಿಗಳಲ್ಲಿ ಭಿನ್ನಭಿನ್ನವಾಗಿರುತ್ತದೆ. ಕ್ರಿಮಿಕೀಟಗಳಲ್ಲಿ ಈ ಅವಧಿ ದಿನಗಳಾದರೆ, ಹಕ್ಕಿಗಳಲ್ಲಿ ತಿಂಗಳುಗಳು, ಹುಲಿಗಳಲ್ಲಿ ಎರಡು ವರ್ಷ, ಆನೆಗಳಲ್ಲಿ ನಾಲ್ಕೈದು ವರ್ಷ ಆಗಿರಬಹುದು. ಮನುಷ್ಯರಲ್ಲಿ ಈ ಅವಧಿಯನ್ನು ಹೆಚ್ಚೆಂದರೆ ಐದಾರು ವರ್ಷಗಳು ಎಂದಿಟ್ಟುಕೊಳ್ಳಬಹುದು.

ಹಾಗಿದ್ದರೆ ಮಾನವ ಶಿಶು ಐದಾರು ವರ್ಷಗಳಲ್ಲಿ ಪೂರ್ಣ ಸ್ವಂತಂತ್ರವಾಗುತ್ತದೆಯೇ? ಪ್ರಕೃತಿಯ ದೃಷ್ಟಿಯಿಂದ ಹೌದು ಎಂದಾದರೂ ನಾವು ಸೃಷ್ಟಿಸಿಕೊಂಡಿರುವ ಸಮಾಜ, ಸಂಸ್ಕೃತಿಗಳ ಕಣ್ಣಿನಲ್ಲಿ ಇದು ಅಸಾಧ್ಯ. ವಿದ್ಯೆ, ಶಿಸ್ತು, ಉದ್ಯೋಗ, ಜೀವನ ಶೈಲಿ, ಸಾಮಾಜಿಕ ಕಟ್ಟುಪಾಡುಗಳು ಮುಂತಾದವು ನಮ್ಮ ಅಗತ್ಯಗಳೇ ಹೊರತು ಪ್ರಕೃತಿಯ ನಿಯಮಗಳಲ್ಲ. ಇದರ ಅರ್ಥ ಪ್ರಕೃತಿಯ ದೃಷ್ಟಿಯಿಂದ ಮಗು ಸ್ವತಂತ್ರ ಜೀವಿಯಾದ ನಂತರವೂ ಮುಂದುವರೆಯುವ ಅಮ್ಮಂದಿರ ಆತಂಕ ಮತ್ತು ಅಧಿಕಾರ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೂಲಗಳಿಂದ ಬಂದಿರುತ್ತದೆ ಎಂದಾಯಿತು. ಅಷ್ಟೇ ಅಲ್ಲ ಮಗುವಿನ ಭದ್ರತೆ ಮತ್ತು ಆರೋಗ್ಯಕ್ಕೆ ಸಂಬಂಧಿಸದೆ ಇರುವ ಆತಂಕಗಳು ಹುಟ್ಟಿನಿಂದಲೇ ಬಂದರೂ ಅದು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳ ಪರಿಣಾಮವೇ ಆಗಿರುತ್ತದೆ. ಉದಾಹರಣೆಗೆ ಅಮ್ಮಂದಿರು ಮಗುವಿಗೆ ಕಲಿಸಬೇಕೆಂದಿರುವ ಶಿಸ್ತು, ಅವರ ವಿದ್ಯಾಭ್ಯಾಸ, ವರ್ತನೆ ಮುಂತಾದವುಗಳು ಅಮ್ಮಂದಿರು ತಮ್ಮ ಮಾನಸಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸೃಷ್ಟಿಸಿಕೊಂಡಿರುವ ಆತಂಕಗಳು. ಇದನ್ನು ತಮಗರಿವಿಲ್ಲದಂತೆ ಮಗುವಿಗೆ ವರ್ಗಾಯಿಸುತ್ತಿರುತ್ತಾರೆ.

**ಅಮ್ಮಂದಿರು ತಮ್ಮ ಮಾನಸಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸೃಷ್ಟಿಸಿಕೊಂಡಿರುವ ಆತಂಕಗಳನ್ನು ತಮಗರಿವಿಲ್ಲದಂತೆ ಮಗುವಿಗೆ ವರ್ಗಾಯಿಸುತ್ತಿರುತ್ತಾರೆ.**

## ಮಕ್ಕಳ ಪರವಾಗಿಯೇ ಏಕೆ?

ಪೋಷಕರು ಮಕ್ಕಳ ಬಾಂಧವ್ಯದ ಬಗೆಗೆ ನಾನು ನಡೆಸುವ ಒಂದು ದಿನದ ಕಾರ್ಯಾಗಾರದಲ್ಲಿ ಇರುವ ಸಾಮಾನ್ಯ ಪ್ರಶ್ನೆ- ನೀವು ಮಕ್ಕಳ ಪರವೇ ಹೆಚ್ಚಾಗಿ ಏಕೆ ಮಾತನಾಡುತ್ತೀರಿ? ನನ್ನ ಮನೆಯಲ್ಲಿಯೂ ಇದೇ ಪ್ರಶ್ನೆಯನ್ನು ಕೇಳಿದ್ದಿದೆ. ನನ್ನ ಸಹಾಯ ಕೇಳುವವರು ಪೋಷಕರಾದ್ದರಿಂದ ಅವರ ಮಾನಸಿಕ ತಳಮಳಗಳ ಬಗೆಗೆ ಮಾತ್ರ ಮಾತನಾಡುವುದು ನನ್ನ ವೃತ್ತಿ ಧರ್ಮ. ಮಕ್ಕಳು ನನ್ನ ಬಳಿ ನೇರವಾಗಿ ಸಹಾಯ ಕೇಳದಿರುವಾಗ ಅವರನ್ನು ಸರಿದಾರಿಗೆ ತರಲು ಪೋಷಕರಿಗೆ ಸಲಹೆಗಳನ್ನು ನೀಡುವುದು ನಿರುಪಯುಕ್ತ. ಮಕ್ಕಳ ಮಾತುಗಳನ್ನು ಕೇಳದೆ ಅವರ ಬಗೆಗೆ ತೀರ್ಮಾನಿಸುವುದರಿಂದ ಅವರಿಗೆ ಮತ್ತು ಪೋಷಕರಿಗೆ ಇಬ್ಬರಿಗೂ ನ್ಯಾಯ ಒದಗಿಸಲು ಸಾಧ್ಯವಿಲ್ಲ.

ಮಕ್ಕಳ ಮನಃಸ್ಥಿತಿ, ಮಾತು, ವರ್ತನೆಗಳು ಪೋಷಕರಿಗೆ ಸಮಸ್ಯೆಯಾಗಿ ಕಂಡರೆ ಅವುಗಳು ಎಲ್ಲಿಂದ ಬಂದಿರಬಹುದು? ವಂಶಪಾರಂಪರ್ಯವಾಗಿ ಅಥವಾ ಪೋಷಕರು ಮಕ್ಕಳೊಡನೆ ವರ್ತಿಸುವ ರೀತಿಯಿಂದ ಮಾತ್ರ ಅವು ಬಂದಿರಲು ಸಾಧ್ಯ. ಇವೆರೆಡಕ್ಕೂ ಪೋಷಕರೇ ಜವಾಬ್ದಾರರಲ್ಲವೇ? ವಂಶವಾಹಿಗಳಲ್ಲಿ ಬರುವುದು ಪೋಷಕರ ಕೈಮೀರಿದ್ದು ಎಂದಾದರೆ ಉಳಿಯುವ ಒಂದೇ ಕಾರಣಕ್ಕಾಗಿ ಪೋಷಕರು ತಮ್ಮೊಳಗಿನ ಗೊಂದಲ ತಳಮಳಗಳನ್ನು ನೋಡಿಕೊಳ್ಳಬೇಕಲ್ಲವೇ? ಶಾಲೆ, ಸ್ನೇಹಿತರು, ಸಮಾಜ, ಸರ್ಕಾರ, ಟೀವಿ, ಮೊಬೈಲ್‌ಗಳಲ್ಲಿ ನಿಮ್ಮ ಸಮಸ್ಯೆಗಳಿಗೆ ಕಾರಣಗಳನ್ನು ಹುಡುಕುತ್ತಿದ್ದರೆ ನಿಮ್ಮ ಹತಾಶೆ ಮುಂದುವರೆಯುವ ಸಾಧ್ಯತೆಗಳು ಹೆಚ್ಚು.


ನಂ.1 ವಶೀಕರಣ ಮೋಡಿಗಾರರು - ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ - 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸ್ಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾಧ್ಯ. ನಿಗೂಢ ಗುಪ್ತ ಸಮಸ್ಯೆಗಳಿಗೇನೆ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ